ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು-570017
Telephone No:0821-2417107

**CHAMUNDESHWARI ELECTRICITY SUPPLY CORPORATION LIMITED**
*(A Government of Karnataka Undertaking)*
Corporate Office,
CESC, Mysuru-570017
**Web Site: www.cescmysore.org.**
E-mail ID: gmtech@cescmysore.org

Company Identity Number[CIN]:- **U40109KA2004SGC035177**

**ಸಂಖ್ಯೆ: ಚಾವಿಸನಿನಿ/ಪ್ರವ್ಯ(ತಾ)/ಉಪ್ರವ್ಯ(ಎಂಐಎಸ್)/ಸಪ್ರವ್ಯ-2/ವ್ಯ/22-23/**13382-85 **ದಿನಾಂಕ:** 23 SEP 2022

ಮುಖ್ಯ ಇಂಜಿನಿಯರ್ (ವಿ),
ಕಾರ್ಯ ಮತ್ತು ಪಾಲನಾ ವಲಯ,
ಚಾವಿಸನಿನಿ, ಮೈಸೂರು.

ಮಾನ್ಯರೇ,

**ವಿಷಯ:** ಮಂಡ್ಯ ಸರ್ಕಾರಿ ಶಾಲಾ/ ಕಾಲೇಜು ಆವರಣದಲ್ಲಿ ಹಾದುಹೋಗಿರುವ 66ಕೆವಿ ವಿದ್ಯುತ್ ಪ್ರಸರಣ ಮಾರ್ಗಗಳನ್ನು ಬಲಪಡಿಸಲು ಮಾರ್ಗ ಮಾರ್ಗಮುಕ್ತತೆಗೆ ಅನುಮೋದನೆ ನೀಡುವ ಬಗ್ಗೆ.

**ಉಲ್ಲೇಖ:** 1. ಮುಇಂ(ವಿ)/ಅಇಂ(ವಿ)/ಸಇಂ(ಕ)-1/4217-20 ದಿನಾಂಕ:22.09.2022.
2. ನಿರ್ದೇಶಕರು(ತಾಂತ್ರಿಕ)ರವರ ಅನುಮೋದಿತ ಟಿಪ್ಪಣಿ ದಿನಾಂಕ: 23.09.2022.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಕವಿಪ್ರನಿನಿ, ಮೈಸೂರು ರವರು ದಿನಾಂಕ 24.09.2022 ರಂದು ಸಮಯ ಬೆಳಿಗ್ಗೆ 08:00 ರಿಂದ ಸಂಜೆ 06:00 ಗಂಟೆವರೆಗೂ ಮಂಡ್ಯ ಸರ್ಕಾರಿ ಶಾಲಾ/ ಕಾಲೇಜು ಆವರಣದಲ್ಲಿ ಹಾದುಹೋಗಿರುವ 66 ಕೆವಿ ಮಾರ್ಗದ ಗೋಪುರಗಳಲ್ಲಿ ಹಾಲಿ ಇರುವ ಸಿಂಗಲ್ ಇನ್ಸುಲೇಟರ್ ಸ್ಟ್ರಿಂಗ್ ಬದಲಾಯಿಸಿ ಡಬ್ಬಲ್ ಇನ್ಸುಲೇಟರ್ ಸ್ಟ್ರಿಂಗ್ ಅಳವಡಿಸಿ ಮಾರ್ಗವನ್ನು ಬಲಪಡಿಸುವ ಕಾಮಗಾರಿಯನ್ನು ಹಮ್ಮಿಕೊಳ್ಳಲು 66 ಕೆವಿ ತೂಬಿನಕೆರೆ-ಮಂಡ್ಯ ಎಂ.ಸಿ(ಮಂಡ್ಯ ಸರ್ಕಾರಿ ವಿಶ್ವವಿದ್ಯಾಲಯ)ಮಾರ್ಗಕ್ಕೆ ಮಾರ್ಗಮುಕ್ತತೆಗಾಗಿ ಸಹಮತಿ ನೀಡುವಂತೆ ಕೋರಿರುತ್ತಾರೆಂದು ತಿಳಿಸಿರುತ್ತೀರಿ.

ಮುಂದುವರೆದು, ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಚಾವಿಸನಿನಿ, ಮಂಡ್ಯ ರವರು ಮೇಲ್ಕಂಡ ಕಾಮಗಾರಿಗೆ ಈ ಕೆಳಕಂಡ ದಿನಾಂಕಗಳಂದು ಮಾರ್ಗಮುಕ್ತತೆಗೆ ನೀಡುವಂತೆ ಶಿಫಾರಸ್ಸು ಮಾಡಿರುತ್ತಾರೆಂದು ತಿಳಿಸಿ ತಾವು ಸಹ ಮಾರ್ಗಮುಕ್ತತೆಗೆ ಶಿಫಾರಸ್ಸು ಮಾಡಿರುತ್ತೀರಿ.

| ಕ್ರಮ ಸಂಖ್ಯೆ | ಪ್ರಸರಣ ಮಾರ್ಗದ ಹೆಸರು | ಮಾರ್ಗ ಮುಕ್ತತೆಯ ದಿನಾಂಕ ಮತ್ತು ಸಮಯ | ಷರಾ |
|---|---|---|---|
| 01 | 66 ಕೆವಿ ತೂಬಿನಕೆರೆ-ಮಂಡ್ಯ ಎಂ.ಸಿ(ಮಂಡ್ಯ ಸರ್ಕಾರಿ ವಿಶ್ವವಿದ್ಯಾಲಯ) | ದಿನಾಂಕ 24.09.2022 ಬೆಳಿಗ್ಗೆ 08:00 ರಿಂದ ಸಂಜೆ 06:00 ಗಂಟೆವರೆಗೂ | 66/11kV Mandya load will transferred on 220kV Hebbani R/s via 66kV Shimsa-Mandya line & 66/11kV Chikkamandya, Hamapapura load will transferred on Nagamangala 220kV R/s via 66kV Nagamangala-Basaralu line. Hence no load Will be effected. |

ಆದುದರಿಂದ, ದಿನಾಂಕ 24.09.2022 ರಂದು ಶಾಲಾ ಅವರಣದಲ್ಲಿ ಹಾದು ಹೋಗಿರುವ ಮಂಡ್ಯ ಸರ್ಕಾರಿ ಶಾಲಾ/ ಕಾಲೇಜು ಆವರಣದಲ್ಲಿ ಹಾದುಹೋಗಿರುವ 66 ಕೆವಿ ಮಾರ್ಗದ ಗೋಪುರಗಳಲ್ಲಿ ಹಾಲಿ ಇರುವ ಸಿಂಗಲ್ ಇನ್ಸುಲೇಟರ್ ಸ್ಟ್ರಿಂಗ್ ಬದಲಾಯಿಸಿ ಡಬ್ಬಲ್ ಇನ್ಸುಲೇಟರ್ ಸ್ಟ್ರಿಂಗ್ ಅಳವಡಿಸಿ ಮಾರ್ಗವನ್ನು ಬಲಪಡಿಸುವ ಕಾಮಗಾರಿಯನ್ನು ಹಮ್ಮಿಕೊಳ್ಳಲು 66 ಕೆವಿ ತೂಬಿನಕೆರೆ-ಮಂಡ್ಯ ಎಂ.ಸಿ(ಮಂಡ್ಯ ಸರ್ಕಾರಿ ವಿಶ್ವವಿದ್ಯಾಲಯ)ಮಾರ್ಗದ ಮಾರ್ಗಮುಕ್ತತೆಗೆ ನಿರ್ದೇಶಕರು(ತಾಂತ್ರಿಕ) ರವರು ಉಲ್ಲೇಖ(2) ರಲ್ಲಿ ಅನುಮೋದಿಸಿರುತ್ತಾರೆ.

ಈ ನಿಟ್ಟಿನಲ್ಲಿ, ಸಂಬಂಧಪಟ್ಟ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ ರವರು, ಮಾರ್ಗಮುಕ್ತತೆಯ ದಿನದಂದು ಐ.ಪಿ ಸ್ಥಾವರಗಳಿಗೆ ಬದಲಾದ ಸಮಯದಲ್ಲಿ ವಿದ್ಯುತ್ ಪೂರೈಸುವಂತೆ ಕ್ರಮ ವಹಿಸಲು, ಕೋವಿಡ್ ಕೇರ್ ಸೆಂಟರ್ ಆಸ್ಪತ್ರೆಗಳಿಗೆ ಬದಲಿ ವಿದ್ಯುತ್ ಸರಬರಾಜು ವ್ಯವಸ್ಥೆ ಮಾಡಲು ಹಾಗೂ ಗ್ರಾಹಕರುಗಳಿಗೆ ವಿದ್ಯುತ್ ವ್ಯತ್ಯಯದ ಮಾಹಿತಿಯನ್ನು ಮುಂಚಿತವಾಗಿ ಪತ್ರಿಕಾ ಪ್ರಕಟಣೆಯ ಮೂಲಕ ತಲುಪಿಸಲು ಮತ್ತು ಸದರಿ ದಿನಾಂಕದಂದು ಕೇಂದ್ರ ಸ್ಥಾನದಲ್ಲೇ ಇದ್ದು ಕೆ.ಪಿ.ಟಿ.ಸಿ.ಎಲ್ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಲೋಡ್ ಮಾನಿಟರಿಂಗ್ ಮಾಡುವಂತೆ ಸೂಚಿಸಲು ನಿರ್ದೇಶಿಸಲ್ಪಟ್ಟಿರುತ್ತೇನೆ.

**ಸೂಚನೆ: ಮೇಲೆ ತಿಳಿಸಿರುವ ಮಾರ್ಗಮುಕ್ತತೆಯ ದಿನಾಂಕಗಳಂದು ಯಾವುದೇ ಸರ್ಕಾರಿ ಕಾರ್ಯಕ್ರಮಗಳು/ಪರೀಕ್ಷೆಗಳಿದ್ದಲ್ಲಿ ಸದರಿ ದಿನಾಂಕದಂದು ಮಾರ್ಗಮುಕ್ತತೆಯು ರದ್ದಾಗುವುದೆಂದು ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.**

ತಮ್ಮ ವಿಶ್ವಾಸಿ

ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಚಾ.ವಿ.ಸ.ನಿ.ನಿ, ಮೈಸೂರು

**ಪ್ರತಿಗಳು:**

1. ಮುಖ್ಯ ಇಂಜಿನಿಯರ್(ವಿ) ಪ್ರಸರಣ ವಲಯ, ಕವಿಪ್ರನಿನಿ, ಮೈಸೂರು.
2. ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ, ಮಂಡ್ಯ, ಚಾವಿಸನಿನಿ.
3. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಡಿಸಿಸಿ, ಚಾವಿಸನಿನಿ, ಮೈಸೂರು.
4. ಆ.ಸ/ತಾ.ಸ., ವ್ಯನಿ/ನಿ(ತಾಂ). ರವರು ಇದನ್ನು ಮಾನ್ಯ ವ್ಯನಿ/ನಿ(ತಾಂ) ರವರ ದಯಾಪರ ಗಮನಕ್ಕೆ ತರಲು ಕೋರಲಾಗಿದೆ.
   ಮುಖ್ಯ ಕಡತ/ ಕಛೇರಿ ಪ್ರತಿ.